ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181 ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

–ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner



ಯುದ್ಧ ಭೂಮಿಯಲ್ಲೂ ಮಹಿಳೆಯರಿಗೆ ಅವಕಾಶ

ಯುದ್ಧ ಭೂಮಿಯಲ್ಲಿ ಮಹಿಳೆಯರಿಗೂ ಪಾತ್ರ ನೀಡುವುದಕ್ಕಾಗಿ ಸೇನೆಗೆ ಮಹಿಳೆಯರ ನೇಮಕಾತಿ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರು ಭಾನುವಾರ ತಿಳಿಸಿದ್ದಾರೆ. ಭಾರತೀಯ ಸೇನೆಯಲ್ಲಿ ಯೋಧರಾಗಿ ಸೇವೆ ಸಲ್ಲಿಸಲು ಮಹಿಳೆಯರೂ ಆಸಕ್ತಿ ತೋರಿಸುತ್ತಿದ್ದಾರೆ. ಹೀಗಾಗಿ ಶೀಘ್ರದಲ್ಲೇ ಈ ಪ್ರಕ್ರಿಯೆಯನ್ನು ಆರಂಭಿಸುತ್ತೇವೆ ಎಂದಿದ್ದಾರೆ.

‘ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ ನಾನಲ್ಲ’

ಡಿಸೆಂಬರ್‌ನಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ ಎಂಬ ಊಹಾಪೋಹಗಳಿಗೆ ತೆರೆ ಎಳೆದಿರುವ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ನಿಗದಿತ ವೇಳೆಗೆ ಚುನಾವಣೆ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ. ನಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲ. ಕಾಂಗ್ರೆಸ್ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವುದಷ್ಟೇ ನನ್ನ ಉದ್ದೇಶ ಎಂದು ಹೇಳಿದ್ದಾರೆ.

ನಿರ್ಮಾಪಕನಿಂದ ಲೈಂಗಿಕ ಕಿರುಕುಳ : ನಟಿ ಆವಂತಿಕಾ ಶೆಟ್ಟಿ ಆರೋಪ

ಸ್ಯಾಂಡಲ್‌ವುಡ್‌ನ ಮತ್ತೊಂದು ವಿವಾದದಲ್ಲಿ ‘ರಂಗಿತರಂಗ’ ಖ್ಯಾತಿಯ ನಟಿ ಆವಂತಿಕಾ ಶೆಟ್ಟಿ ಅವರು ನಿರ್ಮಾಪಕ ಕೆ.ಎ.ಸುರೇಶ್ ವಿರುದ್ಧ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ಆರೋಪ ಮಾಡಿದ್ದಾರೆ. ಸುರೇಶ್ ನಿರ್ಮಾಣದ ರಾಜು ಕನ್ನಡ ಮೀಡಿಯಂ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದ ವೇಳೆ ನನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆವಂತಿಕಾ ಹೇಳಿಕೊಂಡಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :208 ಸೋಮವಾರ ಜೂ.5, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಕಾಡಾನೆ ದಾಳಿಗೆ ಮತ್ತೊಬ್ಬ ಬಲಿ

ರಸ್ತೆ ಪಕ್ಕದಲ್ಲಿ ಮರಿ ಹಾಕಿದ್ದ ಹೆಣ್ಣಾನೆ ರಕ್ಷಣೆಗೆ ನಿಂತ ಆನೆಗಳ ಹಿಂಡು ಆತಂಕಗೊಂಡ ಗ್ರಾಮಸ್ಥರು

ಬಾಳ್ಳುಪೇಟೆ (ಸಕಲೇಶಪುರ ತಾ||) : ರಸ್ತೆ ಪಕ್ಕದಲ್ಲಿ ಹೆಣ್ಣಾನೆಯೊಂದು ಮರಿ ಹಾಕಿದ್ದು, ಇದರ ರಕ್ಷಣೆಗಿದ್ದ 20ಕ್ಕೂ ಹೆಚ್ಚು ಕಾಡಾನೆಗಳ ಪೈಕಿ ಇನ್ನೊಂದು ಆನೆ ವ್ಯಕ್ತಿಯೊಬ್ಬರ ಮೇಲೆ ದಾಳಿ ನಡೆಸಿದ ಪರಿಣಾಮ ಅವರು ಸಾವನ್ನಪ್ಪಿರುವ ಘಟನೆ ಕೆಂಚಮ್ಮನ ಹೊಸಕೋಟೆ ಸಮೀಪದ ಐದೂರು ಬಳಿ ಶನಿವಾರ ರಾತ್ರಿ ನಡೆದಿದೆ.

ರಾತ್ರಿ 10 ಗಂಟೆ ವೇಳೆಯಲ್ಲಿ ಮರದ ಪಕ್ಕದಲ್ಲಿ ಹೆಣ್ಣಾನೆ ಮರಿ ಹಾಕಿತ್ತು. ಈ ಮರಿಯ ರಕ್ಷಣೆಗಾಗಿ 20ಕ್ಕೂ ಹೆಚ್ಚು ಆನೆಗಳು ರಸ್ತೆಯ ಆಸುಪಾಸಿನಲ್ಲಿ ಬೀಡು ಬಿಟ್ಟಿದ್ದವು. ಕಾಫಿ ತೋಟದಿಂದ ಬೆಳೆಗಾರ ಅರುಣ್ ಮನೆಗೆ ತೆರಳುತ್ತಿರುವಾಗ ಆನೆ ದಾಳಿಗೆ ಸಿಲುಕಿದರು. ಅವರನ್ನು ಸಕಲೇಶಪುರ ಆಸ್ಪತ್ರೆಗೆ ದಾಖಲಿಸಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾಸ್ಪತ್ರೆಗೂ ಕರೆದೊಯ್ಯಲಾಯಿತು. ತೀವ್ರ ದಾಳಿಗೊಳಗಾಗಿದ್ದ ಅವರು ಸಾವನ್ನಪ್ಪಿದರು.

ರಸ್ತೆ ಪಕ್ಕದಲ್ಲಿ ಆನೆ ಮರಿ ಹಾಕಿದ್ದರಿಂದ ಕೆಂಚಮ್ಮನ ಹೊಸಕೋಟೆ, ಕೊಡ್ಲಿಪೇಟೆ ಹಾಗೂ ಬಾಳ್ಳುಪೇಟೆಯ ಸುತ್ತಮುತ್ತ ಹತ್ತಾರು ವಾಹನಗಳಲ್ಲಿ 50ಕ್ಕೂ ಹೆಚ್ಚು ಮಂದಿ ಐದೂರಿಗೆ ಬಂದರು.

ಈ ಹಂತದಲ್ಲಿ ಆನೆಗಳು ಜಾಗೃತಗೊಂಡು ದಾಳಿಗೆ ಮುಂದಾಗುತ್ತಿದ್ದವು. ಇದೇ ಸಂದರ್ಭದಲ್ಲಿ ಅರುಣ್ ಕುಮಾರ್ ಅವರು ಕಾಫಿ ತೋಟಕ್ಕೆ ಕಾರ್ಮಿಕರನ್ನು ಬಿಟ್ಟು ಮನೆಗೆ ಬರುತ್ತಿದ್ದರು. ಕಾಡಾನೆ ಮರಿ ಹಾಕಿರುವ ಬಗ್ಗೆ ಇವರಿಗೂ ಗೊತ್ತಾಯಿತು. ಹೆಚ್ಚು ಕಾಡಾನೆಗಳು ಇರುವ ಬಗ್ಗೆ ರಸ್ತೆ ಮಧ್ಯದಲ್ಲೇ ನಿಂತು ಮಾಹಿತಿ ನೀಡುತ್ತಿದ್ದರು. ವಾಹನಗಳು ಇತ್ತ ಬಾರದಂತೆಯೂ ತಿಳಿ ಹೇಳುತ್ತಿದ್ದರು.

ಈ ಹಂತದಲ್ಲಿ ಆನೆಯೊಂದು ಕುಪಿತಗೊಂಡು ಹಿಂಬದಿಯಿಂದ ದಾಳಿ ನಡೆಸಿತು. ದಾಳಿಯ ರಭಸಕ್ಕೆ ಅವರು ದೂರ ಹೋಗಿ ಬಿದ್ದರು. ನಂತರ ಆನೆ ಅಟ್ಟಾಡಿಸಿಕೊಂಡು ದಾಳಿ ನಡೆಸಿತು. ಮನಸೋ ಇಚ್ಛೆ ಕಾಲಿನಲ್ಲಿ ತುಳಿಯಿತು. ಈ ರಭಸಕ್ಕೆ ಕಾಲು, ಎದೆ ಭಾಗದಲ್ಲಿ ರಕ್ತಸ್ರಾವವಾಯಿತು. ಅವರು ತೀವ್ರ ಅಸ್ವಸ್ಥಗೊಂಡರು. ಅಷ್ಟರೊಳಗಾಗಲೇ ಜನ ಎಚ್ಚೆತ್ತು ಅಸ್ವಸ್ಥಗೊಂಡಿದ್ದ ಅರುಣ್ ಕುಮಾರ್ ಅವರನ್ನು ಆಸ್ಪತ್ರೆಗೆ ಕೊಂಡೊಯ್ದರು.

ನಂತರ ಇದೇ ಮಾರ್ಗದಲ್ಲಿ ಹತ್ತಾರು ವಾಹನಗಳು ಓಡಾಡುತ್ತಲೇ ಇದ್ದವು. ಕೊಡ್ಲಿಪೇಟೆ ಕಡೆಯಿಂದ ಬಂದ ಕಾರಿನ ಚಾಲಕ ಲೈಟ್‌ನ್ನು ಆನ್ ಮತ್ತು ಆಫ್ ಮಾಡಿದಾಗ ಆನೆ ಗಾಬರಿಗೊಂಡು ಅರುಣ್ ಮೇಲೆ ದಾಳಿ ನಡೆಸಿತು ಎಂದು ಪ್ರತ್ಯಕ್ಷದರ್ಶಿಗಳು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು. *(-4ನೇ ಪುಟಕ್ಕೆ)*



ಕಾಡಾನೆ ದಾಳಿಯಿಂದ ಕಾಫಿ ಬೆಳೆಗಾರ ಅರುಣ್ ಕುಮಾರ್ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳೆಗಾರರು ಪ್ರತಿಭಟನೆ ನಡೆಸಿದರು.

ಆನೆಗಳ ಪ್ರಾಣಕ್ಕೂ ಬೆಲೆಯಿಲ್ಲ

ಇಲ್ಲಿ ಆನೆಗಳ ಪ್ರಾಣಕ್ಕೂ ಬೆಲೆಯಿಲ್ಲ, ಮನುಷ್ಯರ ಜೀವಕ್ಕೂ ಹೀಗೆಯೇ ಆಗಿದೆ. ಜನವರಿಯಿಂದ ಇಲ್ಲಿಯವರೆಗೆ 2 ಕಾಡಾನೆಗಳು ಸಾವನ್ನಪ್ಪಿವೆ. ಈ ವರ್ಷ ಸಕಲೇಶಪುರ ಸಮೀಪದ ಕೆಂಪುಹೊಳೆ ಬಳಿ ಆನೆಯೊಂದು ಸಾವನ್ನಪ್ಪಿದೆ. ಈ ಪ್ರಕರಣ ಮಾಸುವ ಮುನ್ನವೇ ಮತ್ತೊಂದು ಆನೆ ಸಾವನ್ನಪ್ಪಿತು.

ಆನೆಗಳಿಗೆ ನೆಲೆಯೇ ಇಲ್ಲದಂತಾಗಿದೆ. ಇವುಗಳಿಗೆ ತಿನ್ನಲೂ ಆಹಾರವಿಲ್ಲ. ಆಲೂರು, ಸಕಲೇಶಪುರ ತಾಲ್ಲೂಕಿನಲ್ಲಿ ಪತ್ರಿಕೆಗೆ ದೊರೆತಿರುವ ಮಾಹಿತಿ ಪ್ರಕಾರ 28ಕ್ಕೂ ಹೆಚ್ಚು ಆನೆಗಳಿವೆ. ಕೆಂಚಮ್ಮನ ಹೊಸಕೋಟೆ, ಬಾಳ್ಳುಪೇಟೆ ಸುತ್ತಮುತ್ತಲೇ ಈ ಆನೆಗಳು ಸಂಚರಿಸುತ್ತಿವೆ. ಆಲೂರು ತಾಲ್ಲೂಕಿನ ಕಾಗನೂರು, ದೊಡ್ಡಬೆಟ್ಟ, ಕೆಂಚಮ್ಮನ ಹೊಸಕೋಟೆ, ಕೆರೋಡಿ ಹಾಗೂ ಸಕಲೇಶಪುರ ಭಾಗದಲ್ಲಿ ಆನೆಗಳು ಬೀಡು ಬಿಟ್ಟಿವೆ.

ಆನೆಗಳ ಪ್ರಾಣಕ್ಕೆ ಸಂಚಕಾರ ಆಗುತ್ತಲೇ ಇದೆ. ಇದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿಲ್ಲ. ಆನೆ ಕಾರಿಡಾರ್ ಮಾತ್ರ ಇದಕ್ಕೆ ಸೂಕ್ತ. ಆದರೆ ಇದಕ್ಕೆ ಪ್ರಯತ್ನವೇ ನಡೆದಿಲ್ಲ.

ಶವವಿಟ್ಟು ಪ್ರತಿಭಟನೆ -ಬೆಳೆಗಾರರ ಆಕ್ರೋಶ

ಕಾಡಾನೆ ದಾಳಿಯಿಂದ ಸಾವನ್ನಪ್ಪಿದ ಅರುಣ್ ಕುಮಾರ್ ಅವರ ಶವವನ್ನು ರಸ್ತೆಯ ಮಧ್ಯದಲ್ಲಿಟ್ಟು ಬೆಳೆಗಾರರು ಪ್ರತಿಭಟನೆ ನಡೆಸಿದರು.

ಬಾಳ್ಳುಪೇಟೆ ಹಾಗೂ ಕೊಡ್ಲಿಪೇಟೆ ರಸ್ತೆಯಲ್ಲಿ ರಸ್ತೆತಡೆ ನಡೆಸಿದ ಬೆಳೆಗಾರರು, ಅರಣ್ಯ ಇಲಾಖೆ ವಿರುದ್ಧ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು. ಬೆಳೆಗಾರರ ಸಂಘದ ಅಧ್ಯಕ್ಷ ಉದಯ್ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಹಾಸನದಿಂದ ಶವವನ್ನು ಗ್ರಾಮಕ್ಕೆ ಕೊಂಡೊಯ್ಯುವಾಗ ನೂರಾರು ಜನರು ಅಂತಿಮ ದರ್ಶನ ಪಡೆದರು. ಅಲ್ಲಿದ್ದ ಜನರು ರೊಚ್ಚಿಗೆದ್ದು ದಿಢೀರ್ ರಸ್ತೆತಡೆ ನಡೆಸಿದರು. ಭಾನುವಾರ ಅರ್ಧ ಗಂಟೆಗೂ ಹೆಚ್ಚು ಹೊತ್ತು ರಸ್ತೆತಡೆ ನಡೆಯಿತು.

ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಧರಣಿನಿರತ ಸ್ಥಳಕ್ಕೆ ತೆರಳಿದರು. ಹಿರಿಯ ಪೊಲೀಸ್ ಅಧಿಕಾರಿಗಳು ಅಲ್ಲಿಯೇ ಇದ್ದರು. ಸಕಲೇಶಪುರ ಡಿವೈಎಸ್‌ಪಿ ಧರಣಿನಿರತರ ಮನವೊಲಿಸಿದರಲ್ಲದೆ, ಕಾಡಾನೆ ಸಮಸ್ಯೆ ಬಗ್ಗೆ ಸಂಬಂಧಿಸಿದವರ ಗಮನ ಸೆಳೆಯುವುದಾಗಿಯೂ ಭರವಸೆ ನೀಡಿದರು.

ಇದಾದ ನಂತರ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಸ್ಥಳಕ್ಕೆ ಆಗಮಿಸಿ ಧರಣಿನಿರತರನ್ನು ಭೇಟಿಯಾದರು. ಆನೆ ಕಾರಿಡಾರ್‌ಗೆ ಸಂಬಂಧಿಸಿದಂತೆ ಈಗಾಗಲೇ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರು ಕೂಡ ತಮ್ಮೊಂದಿಗೆ ಮಾತನಾಡಿದ್ದಾರೆ. ಈಗಾಗಲೇ ಸಾವನ್ನಪ್ಪಿದ ಕುಟುಂಬಕ್ಕೆ ಪರಿಹಾರ ಕೂಡ ನೀಡಲಾಗಿದೆ ಎಂದರು.

ಆಗ ಧರಣಿನಿರತರು, ಪರಿಹಾರದಿಂದ ಸಮಸ್ಯೆ ನಿವಾರಣೆ ಸಾಧ್ಯ. ಕಾಡಾನೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂದು ಒತ್ತಾಯಿಸಿದರು. ಆಗ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ಮಧ್ಯೆ ಪ್ರವೇಶಿಸಿ, ಈ ಬಗ್ಗೆ ಇಲಾಖೆ ಕೂಡ ಪ್ರಯತ್ನ ನಡೆಸಿದೆ. ಆನೆ ಹಾವಳಿ ತಡೆಗೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

> “ಈ ಭಾಗದಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ರಾತ್ರಿ ಹಾಗೂ ಮುಂಜಾನೆ ಸಂದರ್ಭದಲ್ಲಿ ಆನೆಗಳು ದಾಳಿ ನಡೆಸುತ್ತಿವೆ. ಕಾಫಿ ತೋಟಗಳಿಗೆ ತೆರಳಲೇ ಆಗುತ್ತಿಲ್ಲ. ಆದರೆ ಅರಣ್ಯ ಇಲಾಖೆ ಏನೂ ಕ್ರಮ ಕೈಗೊಂಡಿಲ್ಲ.
> -ಉದಯ್,
> ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ

> “ಆನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸಲಾಗುವುದು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆನೆ ಕಾರಿಡಾರ್ ಯೋಜನೆಗೆ ಪ್ರಯತ್ನವನ್ನೇ ನಡೆಸಿಲ್ಲ. ಬರೀ ಕಣ್ಣೊರೆಸುವ ಕೆಲಸ ಮಾಡುತ್ತಿದೆ. -ರಾಜು, ಕಾಫಿ ಬೆಳೆಗಾರರು

ಆನೆ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರಕ್ಕೆ ನಿಯೋಗ

ಹಾಸನ : ಆಹಾರ ಇಲ್ಲದೆ ಆನೆಗಳು ಕಾಡಿನಿಂದ ನಾಡಿಗೆ ನುಗ್ಗಿ ಮಾನವನ ಜೊತೆ ಸಂಘರ್ಷಕ್ಕಿಳಿಯುತ್ತಿವೆ. ಆನೆ ದಾಳಿಗೆ ವ್ಯಕ್ತಿ ಬಲಿಯಾಗಿರುವುದು ನನಗೂ ನೋವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಹೇಳಿದರು. ಇದೇ ವೇಳೆ ಸಚಿವರು ಮೃತನ ಕುಟುಂಬಕ್ಕೆ 2 ಲಕ್ಷ ರೂ. ಪರಿಹಾರ ಧನದ ಚೆಕ್ ವಿತರಿಸಿದರು.

ಆನೆ ದಾಳಿಗೆ ಬಲಿಯಾದ ವ್ಯಕ್ತಿಯನ್ನು ನೋಡಲು ಜಿಲ್ಲಾಸ್ಪತ್ರೆಗೆ ಬಂದ ಸಚಿವರನ್ನು ಆ ಭಾಗದ ರೈತರು ತರಾಟೆಗೆ ತೆಗೆದುಕೊಂಡರು.

ಸರ್ಕಾರಿ ಕೆಲಸದಲ್ಲಿರುವವರು ಸತ್ತರೆ ಅವರ ಕುಟುಂಬಕ್ಕೆ ಉದ್ಯೋಗ ನೀಡುತ್ತಾರೆ. ಪಿಂಚಣಿ ನೀಡುತ್ತಾರೆ. ರೈತರು ಏನು ಮೋಸ ಮಾಡಿದ್ದಾರೆ? ಅವರಿಗ್ಯಾಕೆ ಸರ್ಕಾರ, ರಾಜಕಾರಣಿಗಳು ಮತ್ತು ಅಧಿಕಾರಿಗಳು ಮೋಸ ಮಾಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಹೆಚ್.ಕೆ.ಕುಮಾರಸ್ವಾಮಿ ಮತ್ತು ರೈತರ ಮನವಿಗೆ ಸ್ಪಂದಿಸಿದ ಸಚಿವರು, ಸೋಮವಾರದಿಂದ ಆರಂಭವಾಗುವ ವಿಧಾನಸಭೆ ಅಧಿವೇಶನದಲ್ಲಿ ಆನೆ ಕಾರಿಡಾರ್ ನಿರ್ಮಾಣಕ್ಕೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಅಧಿವೇಶನ ಮುಗಿದ ನಂತರ ದೆಹಲಿಗೆ ತೆರಳಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಆನೆ ಕಾರಿಡಾರ್ ನಿರ್ಮಾಣಕ್ಕೆ ಆಗ್ರಹಿಸಲಾಗುವುದು ಎಂದು ಹೇಳಿದರು.

ಅಧಿಕಾರಿಗೆ ಸೂಚನೆ : ಆನೆಗಳನ್ನು ಹಿಡಿದು ಒಂದು ಕಡೆ ಕೂಡಿ ಹಾಕಿ, ಕೃಷಿ ಜಮೀನಿಗೆ ದಾಳಿ ಮಾಡದಂತೆ ನೋಡಿಕೊಳ್ಳಿ. ಐದಾರು ವಾಹನಗಳಿಂದ ಆನೆಗಳು ಎಲ್ಲಿವೆ ಎಂಬುದರ ಬಗ್ಗೆ ರೈತರಿಗೆ ಮಾಹಿತಿ ನೀಡಿ ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಶಾಶ್ವತ ಪರಿಹಾರ ಬೇಕು : ಆನೆ ದಾಳಿಗೊಳಗಾದ ರೈತರಿಗೆ ಉದ್ಯೋಗ ನೀಡಿ, ಶಾಶ್ವತ ಪರಿಹಾರ ಕೊಡಬೇಕು. ಆನೆ ಕಾರಿಡಾರ್‌ನ್ನು ಶೀಘ್ರದಲ್ಲೇ ನಿರ್ಮಿಸಬೇಕು ಎಂದು ಗ್ರಾಮಸ್ಥರು ಸಚಿವರನ್ನು ಆಗ್ರಹಿಸಿದರು.

ಆನೆಗಳಿಂದ ಪ್ರಾಣಭಯ ಉಂಟಾಗಿದೆ. ಅವು ಎಲ್ಲಿ ಚಲಿಸುತ್ತವೆ ಎಂಬುದೇ ತಿಳಿಯುವುದಿಲ್ಲ. ಅವುಗಳು ನಡೆಯುವಾಗ ಶಬ್ದ ಬರುವುದಿಲ್ಲ. ಹೀಗಾಗಿ ನಮಗೆ ಭೀತಿ ಉಂಟಾಗಿದೆ. ಶೀಘ್ರದಲ್ಲೇ ಆನೆ ಸಮಸ್ಯೆ ಬಗೆಹರಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗುಂಡು ಹಾರಿಸಿ ವ್ಯಕ್ತಿಗೆ ಗಾಯ

ಅರಕಲಗೂಡು : ಬಂದೂಕಿನಿಂದ ಗುಂಡು ಹಾರಿಸಿ ವ್ಯಕ್ತಿಯೊಬ್ಬರನ್ನು ಗಾಯಗೊಳಿಸಿರುವ ಘಟನೆ ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಆಲದಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಗ್ರಾಮದ ಪ್ರಕಾಶ ಎಂಬಾತ ಗಾಯಗೊಂಡಿರುವ ವ್ಯಕ್ತಿ. ಪಕ್ಕದ ಮನೆಯ ನಿವಾಸಿ ಕೇಶವೇಗೌಡ ಬಂದೂಕಿನಿಂದ ಗುಂಡು ಹಾರಿಸಿದ್ದಾನೆ. ಪ್ರಕಾಶನ ತೊಡೆಗೆ ಗುಂಡು ತಗುಲಿ ಗಾಯವಾಗಿದ್ದು, ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಕೇಶವೇಗೌಡ ಹಾಗೂ ಪ್ರಕಾಶ ಅಕ್ಕಪಕ್ಕದ ಮನೆಯ ನಿವಾಸಿಗಳು. ಕೇಶವೇಗೌಡ ಶನಿವಾರ ಊರಿನಲ್ಲಿ ಇರಲಿಲ್ಲ. ಭಾನುವಾರ ಬಂದ ಅವರಿಗೆ, ರಾತ್ರಿ ವೇಳೆ ನಿಮ್ಮ ಮನೆಯ ಬಾಗಿಲನ್ನು ಪ್ರಕಾಶ ತಟ್ಟುತ್ತಿದ್ದ ಎಂದು ಯಾರೋ ಸುದ್ದಿ ಮುಟ್ಟಿಸಿದರು ಎನ್ನಲಾಗಿದೆ. ಇದರಿಂದ ಸಿಟ್ಟಿಗೆದ್ದ ಕೇಶವೇಗೌಡ, ಪ್ರಕಾಶನೊಂದಿಗೆ ಮಾತಿನ ಚಕಮಕಿ ನಡೆಸಿದ್ದಾನೆ. ಜಗಳ ತಾರಕಕ್ಕೇರಿದಾಗ ರೊಚ್ಚಿಗೆದ್ದ ಕೇಶವೇಗೌಡ ಮನೆಯಲ್ಲಿದ್ದ ಬಂದೂಕು ತಂದು ಪ್ರಕಾಶನ ಮೇಲೆ ಗುಂಡು ಹಾರಿಸಿದ್ದಾನೆ ಎಂದು ಆರೋಪಿಸಲಾಗಿದೆ. ತೊಡೆಗೆ ಗುಂಡೇಟು ಬಿದ್ದು ಪ್ರಕಾಶ ಗಾಯಗೊಂಡಿದ್ದು, ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಿಎಸ್‌ಐ ರವಿಕಿರಣ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಆರೋಪಿ ಕೇಶವೇಗೌಡನನ್ನು ವಶಕ್ಕೆ ಪಡೆದಿರುವ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಪಾಕ್ ವಿರುದ್ಧ ಭಾರತಕ್ಕೆ ಭರ್ಜರಿ ಜಯ

ಬರ್ಮಿಂಗ್‌ಹ್ಯಾಮ್ : ಮಿನಿ ವಿಶ್ವಕಪ್ ಎಂದೇ ಖ್ಯಾತಿ ಗಳಿಸಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಸರಣಿಯಲ್ಲಿ ಭಾರತ ಶುಭಾರಂಭ ಮಾಡಿದ್ದು, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು 124 ರನ್‌ಗಳ ಅಂತರದಿಂದ (ಡಕ್ವರ್ತ್ ಲೂಯಿಸ್ ನಿಯಮದಡಿ) ಬಗ್ಗುಬಡಿದು ಭರ್ಜರಿ ಗೆಲುವು ಸಾಧಿಸಿದೆ.

ಭಾರತ ನೀಡಿದ್ದ 324 ರನ್‌ಗಳ ಗುರಿಯನ್ನು ಬೆನ್ನುಹತ್ತಿದ ಪಾಕಿಸ್ತಾನಕ್ಕೆ ಮಳೆ ಅಡ್ಡಿಯಾಗಿತ್ತು. ಆದರೆ ಮಳೆ ನಿಂತಾಗ ಡಕ್ವರ್ತ್ ಲೂಯಿಸ್ ನಿಯಮದನ್ವಯ ಪಂದ್ಯವನ್ನು 41 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಅಂತೆಯೇ ರನ್ ಗುರಿಯನ್ನು ಕೂಡ 41 ಓವರ್‌ಗಳಿಗೆ 289 ರನ್‌ಗಳು ಎಂದು ನಿಗದಿಪಡಿಸಲಾಯಿತು. ಈ ಗುರಿಯನ್ನು ಬೆನ್ನು ಹತ್ತಿದ ಪಾಕಿಸ್ತಾನ ಭಾರತೀಯ ಬೌಲರ್‌ಗಳ ಕರಾರುವಕ್ ದಾಳಿಗೆ ತತ್ತರಿಸಿ 33.4 ಓವರ್‌ಗಳಲ್ಲಿ ಕೇವಲ 164 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಜೈನರ ಕಾಶಿ ಶ್ರವಣಬೆಳಗೊಳಕ್ಕೆ ವರ್ಧಮಾನ ಸಾಗರರ ಮಂಗಲ ಪ್ರವೇಶ

ಶ್ರವಣಬೆಳಗೊಳ : ಜೈನ ಕಾಶಿ, ಬಾಹುಬಲಿಯ ನೆಲೆವೀಡು ಭಾನುವಾರ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿತ್ತು. ಗೊಮ್ಮಟೇಶ್ವರನ ಊರು ತಳಿರು-ತೋರಣ, ಹೂಗಳ ಅಲಂಕಾರದಿಂದ ಮದುವಣಗಿತ್ತಿಯಂತೆ ಶೃಂಗಾರಗೊಂಡಿತ್ತು. ಇಂತಹ ಅಪರೂಪದ ಸನ್ನಿವೇಶದಲ್ಲಿ ಪರಮ ಪೂಜ್ಯ ಶ್ರೀ 108 ವರ್ಧಮಾನ ಸಾಗರ ಮಹಾರಾಜರು ತಮ್ಮ ಸಂಘಸ್ಥ 44 ತ್ಯಾಗಿಗಳೊಂದಿಗೆ ಮಂಗಲ ಪ್ರವೇಶ ಮಾಡಿದರು.

ಮಧ್ಯ ಪ್ರದೇಶದ ಇಂದೋರ್ ಬಳಿ ಇರುವ ಶ್ರೀ ಸಿದ್ಧ ಕ್ಷೇತ್ರ ಸಿದ್ದವರ ಕೂಟದಿಂದ ವರ್ಧಮಾನ ಮಹಾರಾಜರು 44 ತ್ಯಾಗಿಗಳೊಂದಿಗೆ 1500 ಕಿಲೋ ಮೀಟರ್ ದೂರದಿಂದ ಬರಿಗಾಲಲ್ಲಿ ಪಾದಯಾತ್ರೆ ಮೂಲಕ ಶ್ರವಣಬೆಳಗೊಳಕ್ಕೆ ಪುರ ಪ್ರವೇಶ ಮಾಡಿದರು.

ಶ್ರವಣಬೆಳಗೊಳ ಜೈನ ಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಜೈನ ಧರ್ಮದ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಶ್ರದ್ಧಾ ಭಕ್ತಿಯಿಂದ ಮಂಗಲ ಪ್ರವೇಶ ನಡೆಯಿತು. ದೇಶ ಹಾಗೂ ರಾಜ್ಯದ ವಿವಿಧ ಮೂಲೆಗಳಿಂದ ಸುಮಾರು 5 ಸಾವಿರ ಜನರು ಆಗಮಿಸಿದ್ದರು.

2018ರ ಫೆಬ್ರವರಿ 17ರಿಂದ ನಡೆಯುವ ಜಗದ್ವಿಖ್ಯಾತ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕ ಮಹೋತ್ಸವದ ನಿಮಿತ್ತ ಶ್ರವಣಬೆಳಗೊಳದ ಗೊಮ್ಮಟ ನಗರ ಸಭಾ ಮಂಟಪದಲ್ಲಿ ನಡೆದ ಕಾರ್ಯಕ್ರಮ ಅಚ್ಚುಕಟ್ಟಾಗಿತ್ತು.

ಧಾರ್ಮಿಕ ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಶ್ರೀಕ್ಷೇತ್ರಕ್ಕೆ ಆಗಮಿಸುವಾಗ ಪೂಜ್ಯ ಮಹಾರಾಜರನ್ನು ಚನ್ನರಾಯಪಟ್ಟಣ ರಸ್ತೆಯ ರೈಲು ನಿಲ್ದಾಣ ಗೇಟ್ ಬಳಿ ನಿರ್ಮಾಣ ಮಾಡಿರುವ ತಾತ್ಕಾಲಿಕ ಪ್ರವೇಶ ದ್ವಾರದಲ್ಲಿ ಪುಷ್ಪ ವೃಷ್ಟಿಗಳೊಂದಿಗೆ ಪಾದಪೂಜೆ ನೆರವೇರಿಸಿ ಪೂರ್ಣಕುಂಭ ಸ್ವಾಗತದ ಮೂಲಕ ಬರಮಾಡಿಕೊಳ್ಳಲಾಯಿತು.

ನಂತರ 108 ಕಳಸ, 108 ಧ್ವಜ, 24 ಲಾಂಛನ, 3 ಬೆಳ್ಳಿ ಪಲ್ಲಕ್ಕಿ, ಮಂಗಳ ವಾದ್ಯ, ನಾದಸ್ವರ, ಮೈಸೂರು ಬ್ಯಾಂಡ್ ಸೆಟ್, ಚಂಡೆ ವಾದ್ಯ, ಚಿಟ್ಟಿ ಮೇಳ, ಡೊಳ್ಳು ಕುಣಿತ, ಕೋಲಾಟ ಹಾಗೂ ವಿವಿಧ ಕಲಾ ತಂಡಗಳ ಬೃಹತ್ ಮೆರವಣಿಗೆಯೊಂದಿಗೆ ರಾಚೇನಹಳ್ಳಿ ಗೇಟ್‌ನಿಂದ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯ ಮಾರ್ಗವಾಗಿ ಗೊಮ್ಮಟನಗರದಲ್ಲಿ ನಿರ್ಮಿಸಿದ್ದ ಬೃಹತ್ ಸಭಾ ಮಂಟಪದ ವೇದಿಕೆಗೆ ಗೌರವಪೂರ್ವಕವಾಗಿ ಕರೆತರಲಾಯಿತು. ಸಭಾ ಮಂಟಪದ ವೇದಿಕೆಗೆ ಆಗಮಿಸಿದ್ದ ಎಲ್ಲರಿಗೂ ಉಚಿತವಾಗಿ ಕಬ್ಬಿನ ಹಾಲು, ಶರಬತ್ತು ನೀಡಲಾಯಿತು. ಶ್ರೀಮಠದ ಭೋಜನ ಶಾಲೆಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ರಾಜ್ಯದ ನಾನಾ ಭಾಗಗಳಿಂದಲ್ಲದೇ ಹೊರರಾಜ್ಯಗಳಿಂದಲೂ ಜೈನ ಸಮುದಾಯ ಹಾಗೂ ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದರು. ಶ್ರೀಗಳನ್ನು ಸ್ವಾಗತಿಸಲು ಶ್ರೀ ಕ್ಷೇತ್ರ ಸಕಲ ರೀತಿಯಲ್ಲಿ ಸಜ್ಜುಗೊಂಡಿತ್ತು. ಕ್ಷೇತ್ರದ ಎಲ್ಲೆಡೆ ಹಬ್ಬದ ವಾತಾವರಣವಿತ್ತು.

‘ಸುಖ ನಮ್ಮ ಮನೆಯಲ್ಲೇ ಇದೆ’

ರಾಗ, ದ್ವೇಷ, ಅಹಿಂಸೆಯಿಂದ ನೆಮ್ಮದಿ ಸಾಧ್ಯ ಇಲ್ಲ. ಸುಖ ನಮ್ಮ ಮನೆಯಲ್ಲೇ ಇದೆ ಎಂದು ಆಚಾರ್ಯ 108 ವರ್ಧಮಾನ ಸಾಗರರು ಜನತೆಗೆ ಆಶೀರ್ವಚನ ನೀಡಿದರು.

ಶ್ರವಣಬೆಳಗೊಳಕ್ಕೆ ಮಂಗಳ ಪ್ರವೇಶ ಮಾಡಿದ ನಂತರ ಸಭಾ ಮಂಟಪದಲ್ಲಿ ಶ್ರೀಗಳು ಆಶೀರ್ವಚನ ನೀಡಿ, ಸುಖ ನಮ್ಮ ಮನಸ್ಸಿನಲ್ಲೂ ಇದೆ. ಸುಖ ಪ್ರಾಪ್ತಿಯಾಗಬೇಕಾದರೆ ರಾಗ, ದ್ವೇಷ, ಅಹಿಂಸೆ ಬಿಡಬೇಕೆಂದು ಮಾರ್ಗದರ್ಶನ ನೀಡಿದರು.

ಅಹಿಂಸೆಯಿಂದ ಪ್ರಗತಿ ಸಾಧಿಸಬಹುದು. ಬಾಹುಬಲಿಯ ಸಂದೇಶ ಅಳವಡಿಸಿಕೊಂಡರೆ ವಿಶ್ವದಲ್ಲಿ ಶಾಂತಿ ಸಾಧ್ಯ ಎಂದು ಶ್ರೀಗಳು ಬೋಧಿಸಿದರು. ತ್ಯಾಗ, ಮೈತ್ರಿ, ಧ್ಯಾನದಿಂದ ಆತ್ಮಶಾಂತಿ ಜೊತೆಗೆ ಎಲ್ಲವೂ ಪ್ರಾಪ್ತಿಯಾಗುತ್ತದೆ. ಹಿಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಈ ತತ್ವಗಳನ್ನು ಅಳವಡಿಸಿಕೊಂಡಿದ್ದರು ಎಂದು ತಿಳಿಸಿದರು.

ಮಸ್ತಕಾಭಿಷೇಕಕ್ಕೆ ಆಹ್ವಾನ

ಇದೇ ವೇಳೆ ವರ್ಧಮಾನ ಮಹಾರಾಜರಿಗೆ ಫಲ ತಾಂಬೂಲ ನೀಡಿ ಮಾತನಾಡಿದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಶಾಸಕರಾದ ಸಿ.ಎನ್.ಬಾಲಕೃಷ್ಣ, ಗೋಪಾಲಸ್ವಾಮಿ ಅವರುಗಳಿಗೆ ಮಹಾ ಮಸ್ತಕಾಭಿಷೇಕಕ್ಕೆ ಆಹ್ವಾನ ನೀಡಿದರು.

ಮುಂದೆ ನಡೆಯುವ ಮಹಾಮಸ್ತಕಾಭಿಷೇಕ ಆಚರಣೆಗೆ ಕಳೆ ಬಂದಿತ್ತು.

ಕೊರತೆ ಇಲ್ಲದೆ ಮಸ್ತಕಾಭಿಷೇಕ ಆಚರಣೆ : ಈ ಬಾರಿ ಯಾವುದೇ ಸಣ್ಣ ಕುಂದು ಕೊರತೆ ಇಲ್ಲದಂತೆ ಅದ್ದೂರಿ ಮಹಾ ಮಸ್ತಕಾಭಿಷೇಕ ಆಚರಿಸಲಾಗುವುದು ಎಂದು ಸಚಿವ ಎ.ಮಂಜು ಭರವಸೆ ನೀಡಿದರು.

ಸಭಾ ಮಂಟಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಸ್ತಕಾಭಿಷೇಕಕ್ಕೆ ಸರ್ಕಾರ 175 ಕೋಟಿ ರೂ. ಹಣ ನೀಡಿದೆ. ಅಂದಾಜು 35 ಲಕ್ಷ ಜನ ಮಹೋತ್ಸವಕ್ಕೆ ಆಗಮಿಸುವ ನಿರೀಕ್ಷೆ ಇದೆ ಎಂದರು. *(-ಪುಟ 4ಕ್ಕೆ)*

ಉತ್ತರಕ್ರಿಯಾರಾಧನೆಗೆ ಆಹ್ವಾನ



ಶ್ರೀ ಹನುಮಂತೇಗೌಡರು (ಶತಾಯುಷಿಗಳು)
ಮರಣ :26-5-2017

ಶ್ರೀಮತಿ ತಿಮ್ಮಮ್ಮ (ದಿ||ಹನುಮಂತೇಗೌಡರ ಧರ್ಮಪತ್ನಿ)
ಮದಲಾಪುರ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾ||
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 26-5-2017ನೇ ಶುಕ್ರವಾರದಂದು ನನ್ನ ಪೂಜ್ಯ ಪತಿಯವರಾದ **ಶ್ರೀ ಹನುಮಂತೇಗೌಡರು** (ಶತಾಯುಷಿಗಳು) ದೈವಾಧೀನರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಯನ್ನು ದಿನಾಂಕ 5-06-2017ನೇ ಸೋಮವಾರ ಮಧ್ಯಾಹ್ನ 1 ಗಂಟೆಗೆ ‘ಮೃತರ ಸ್ವಗೃಹ ಮದಲಾಪುರ ಗ್ರಾಮದಲ್ಲಿ’ ನಡೆಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಬೇಕಾಗಿ ಕೋರುವ,

ತಮ್ಮ ವಿಶ್ವಾಸಿ, **ಶ್ರೀಮತಿ ತಿಮ್ಮಮ್ಮ**

ದುಃಖಭಾಗಿಗಳು : ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಕೃಷ್ಣೇಗೌಡ, ನಿವೃತ್ತ ಸಹ ಹಿರಿಯ ಪಶು ವೈದ್ಯ ಪರೀಕ್ಷಕರು, ಹಾಸನ. ಶ್ರೀಮತಿ ಜಯಮ್ಮ ಮತ್ತು ಶ್ರೀ ಎಸ್.ಬಿ.ಚೆಲುವಪ್ಪ, ನಿವೃತ್ತ ಮುಖ್ಯ ಉಪಾಧ್ಯಾಯರು, ಸಣ್ಣೇಗೌಡನ ಕೊಪ್ಪಲು, ಶ್ರೀಮತಿ ಗೌರಮ್ಮ ಮತ್ತು ಶ್ರೀ ಮೋಗಣ್ಣಗೌಡ, ನಿವೃತ್ತ ಪಶು ವೈದ್ಯರು, ಮೈಸೂರು, ಶ್ರೀಮತಿ ಶಾರದಾ ಮತ್ತು ಶ್ರೀ ಯೋಗೀಶ್, ಜಮೀನ್ದಾರರು, ಮದಲಾಪುರ, ಶ್ರೀಮತಿ ಸುಧಾ ಮತ್ತು ಶ್ರೀ ಕೇಶವಮೂರ್ತಿ, ಶ್ರೀ ಮಾರುತಿ ಆಯಿಲ್ ಡಿಪೋ ಮಾಲೀಕರು ಹಾಗೂ ಕ್ಯಾಸ್ಟ್ರಾಲ್ ಡಿಸ್ಟ್ರಿಬ್ಯೂಟರ್ಸ್, ಹಾಸನ ಹಾಗೂ ಮೊಮ್ಮಕ್ಕಳು, ಮರಿ ಮಕ್ಕಳು, ಬಂಧು ವರ್ಗದವರು ಮತ್ತು ಮದಲಾಪುರ ಗ್ರಾಮಸ್ಥರು.

ವಿ.ಸೂ. : ಆಹ್ವಾನಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.

ಗ್ರಾಹಕರನ್ನು ಕೈ ಬೀಸಿ ಕರೆಯುತ್ತಿದೆ ಹಲಸು-ಮಾವು ಮೇಳ

ಹಾಸನ : ಹಸಿದು ಹಲಸು ತಿನ್ನು-ಉಂಡು ಮಾವು ತಿನ್ನು, ಆರೋಗ್ಯಕ್ಕೆ ಒಳ್ಳೆಯದು. ಹೌದು, ಹಲಸು, ಮಾವಿನ ಹಣ್ಣಿನಲ್ಲಿ ಆರೋಗ್ಯವರ್ಧಕ ಪೌಷ್ಠಿಕಾಂಶಗಳಿವೆ. ಜನರಿಗೆ ರಾಸಾಯನಿಕ ಮುಕ್ತ ಹಣ್ಣು ನೀಡಲು ನಗರದ ಕಲಾಭವನದಲ್ಲಿ ಭಾನುವಾರದಿಂದ ಮಾವು ಮೇಳ ಆರಂಭವಾಗಿದೆ.

ಜೂ.10ರವರೆಗೆ ಮಾವು ಮತ್ತು ಹಲಸಿನ ಮಾರಾಟ ಮತ್ತು ಪ್ರದರ್ಶನ ನಡೆಯುತ್ತಿದ್ದು, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳು ಕೈಗೆಟುಕುವ ದರದಲ್ಲಿ ದೊರೆಯಲಿದೆ. ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರಿಂದ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಾಗೂ ತೋಟಗಾರಿಕಾ ಇಲಾಖೆ ಸಹಯೋಗದಲ್ಲಿ ಈ ಮೇಳ ಮೇ 10ರವರೆಗೆ ನಡೆಯಲಿದ್ದು, ಜನರು ಗುಣಮಟ್ಟದ ಮಾವು ಖರೀದಿಸಬಹುದು.

ಉದ್ದೇಶ : ಕಾರ್ಬೈಡ್ ಮುಕ್ತ, ಪ್ಲಾಸ್ಟಿಕ್ ರಹಿತ, ನೈಸರ್ಗಿಕವಾಗಿ ಮಾಗಿದ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಈ ಮೇಳ ಆಯೋಜಿಸಲಾಗಿದೆ.

ಸುವಾಸನೆ : ವಿವಿಧ ಜಿಲ್ಲೆಗಳಿಂದ ಹಲವಾರು ರೈತರು ಬೆಳೆದಿದ್ದ ವಿವಿಧ ತಳಿಗಳನ್ನು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿಡಲಾಗಿತ್ತು. ನೈಸರ್ಗಿಕ ಹಣ್ಣುಗಳ ಘಮಘಮಿಸುವ ಸುವಾಸನೆ ಜನರನ್ನು ಮಾತ್ರ ಕೊಳ್ಳುವಂತೆ ಆಕರ್ಷಿಸಿತು.

ಬಾಯಲ್ಲಿ ನೀರೂರಿಸುವ ರುಚಿ ರುಚಿಯಾದ ಬಾದಾಮಿ, ರಸಪುರಿ, ತೋತಾಪುರಿ, ನೀಲಂ, ಕೇಸರ್, ಮಲಗೋವ, ಮಲ್ಲಿಕಾ, ಬಂಗನಪಲ್ಲಿ, ಅಮ್ರಪಲ್ಲಿ, ಲಡ್ಡು ಹೀಗೆ ತರಹೇವಾರಿ 18ಕ್ಕೂ ಹೆಚ್ಚು ತಳಿಯ ಹಣ್ಣುಗಳು ಗ್ರಾಹಕರನ್ನು ಕೈಬೀಸಿ ಕರೆಯುತ್ತಿದ್ದವು.

ಘಮಘಮಿಸುತ್ತಿದ್ದ ಹಲಸಿನ ಹಣ್ಣುಗಳು ಬಾಯಲ್ಲಿ ನೀರೂರಿಸಿದವು. ಹಲವರು ಮಾತ್ರ ಹಲಸಿನ ಹಣ್ಣನ್ನು ಖುಷಿಯಿಂದ ಖರೀದಿಸಿದರು.

ಹಾಪ್‌ಕಾಮ್ಸ್‌ನಿಂದ ಹಾಲು ಮಾರಾಟ

ಮಾವು ಮೇಳ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು, ಹಾಪ್‌ಕಾಮ್ಸ್ ಮೂಲಕ ಹಾಲು ಮಾರಾಟ ಮಾಡಲಾಗುವುದು ಎಂದರು.

ರೈತರು ಬೆಳೆದ ಹಣ್ಣುಗಳನ್ನು ಮಾರಾಟ ಮಾಡುವಂತೆಯೇ ಹಾಲನ್ನು ಕೂಡ ಮಾರಲು ಚಿಂತಿಸಲಾಗಿದೆ ಎಂದು ಹೇಳಿದರು.

Opening Ceremony
The Honor of Your Presence is Requested
At the Grand Opening Ceremony of
"Shamy's Lounge"
Kindly Join us With Your Lovely Family & Friends
Shamy's Lounge
Unisex Salon & Spa
Date : On 5th June 2017 Monday Time : 11-30am onwards
Venue :
117, Sunrise Arcade, Shop no - 104, Shankar Mutt Road, K R Puram, Hassan - 573201. ☎ 08172-262656, 262657, 8296669451.
email : shamyslounge@gmail.com